ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 02–10–2021

# ಪತ್ರಿಕಾ ಪ್ರಕಟಣೆ

**PRESS RELEASE**

## ಗಾಂಧೀಜಿವರು ಕಂಡ ಭಾರತವನ್ನು ನಾವೆಲ್ಲ ಒಟ್ಟಾಗಿ ಸೇರಿ ಕಟ್ಟೋಣ

– ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ

ಬೆಂಗಳೂರು, ಅಕ್ಟೋಬರ್ 02, (ಕರ್ನಾಟಕ ವಾರ್ತೆ) :

ಗಾಂಧೀಜಿ ಎಂದರೆ ಅವರು ಓರ್ವ ವ್ಯಕ್ತಿಯಲ್ಲ, ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ನೈತಿಕ ಭಾರತವನ್ನು ಕಟ್ಟಿದಂತಹ ವ್ಯಕ್ತಿ, ಅಹಿಂಸೆಯೇ ಅವರ ತತ್ವ, ಅವರ ಆದರ್ಶಗಳು ನಮಗೆ ಸ್ಫೂರ್ತಿದಾಯಕವಾಗಲಿ. ಮಹಾತ್ಮ ಗಾಂಧೀಜಿಯವರು ಕಂಡಂತಹ ಭಾರತವನ್ನು ನಾವೆಲ್ಲರೂ ಒಟ್ಟಾಗಿ ಸೇರಿ ಕಟ್ಟೋಣ ಎಂದು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ತಿಳಿಸಿದರು.

ಇಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಬೆಂಗಳೂರು ಇವರ ವತಿಯಿಂದ ಗಾಂಧೀ ಭವನದ ಮಹದೇವ ದೇಸಾಯಿ ಸಭಾಂಗಣದಲ್ಲಿ ಆಯೋಜಿಸಲಾದ ಮಹಾತ್ಮ ಗಾಂಧೀಜಿಯವರ ಜನ್ಮದಿನಾಚರಣೆ ಕಾರ್ಯಕ್ರಮದ ಉದ್ಘಾಟನೆ, 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಲೋಗೋ ಲೋಕಾರ್ಪಣೆ, ಹಾಗೂ "ಮಹತ್ಮಾಗಾಂಧಿ ಸೇವಾ ಪ್ರಶಸ್ತಿ – ಕರ್ನಾಟಕ" ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಮುಖ್ಯಮಂತ್ರಿಗಳು ತಾತ್ವಿಕ ಹಿನ್ನೆಲೆ, ಸೈದ್ಧಾಂತಿಕ ಹಿನ್ನೆಲೆಯ ಜೊತೆಗೆ ವೈಜ್ಞಾನಿಕ ಹಿನ್ನೆಲೆಯನ್ನು ತೋರಿಸಿಕೊಟ್ಟಂತವರು ಮಹಾತ್ಮ ಗಾಂಧೀಜಿ. ಗ್ರಾಮಸ್ವರಾಜ್ ನಿರ್ಮಾಣ ಅವರ ಕನಸ್ಸಾಗಿತ್ತು ಧೀನ–ದಲಿತರ ಉದ್ಧಾರಕ್ಕಾಗಿ ಗಾಂಧೀಜಿಯವರು ಬಹು ದೊಡ್ಡ ತ್ಯಾಗ ಮಾಡಿದ್ದಾರೆ ಎಂದು ತಿಳಿಸಿದರು.

ಇಂದು ಗಾಂಧೀಜಿಯವರ ಜನ್ಮ ದಿನಾಚರಣೆಯ ಜೊತೆಗೆ ಲಾಲ್ ಬಹುದ್ದೂರ್ ಶಾಸ್ತ್ರಿಯವರ ಜನ್ಮದಿನಾಚರಣೆಯೂ ಸಹ. ಈ ಇಬ್ಬರು ಮಹಾನ್ ನಾಯಕರಿಗೆ ನಾನು ಮೊದಲಿಗೆ ಗೌರವಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಹಲವಾರು ಮಹಾನ್ ನಾಯಕರು ಗಾಂಧೀಜಿಯವರ ಜೊತೆಗೂಡಿ ಹೋರಾಟ ಮಾಡಿದ ಫಲವಾಗಿ ನಾವು ಬ್ರಿಟಿಷರಿಂದ ಮುಕ್ತಿ ಹೊಂದಿ ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಗಾಂಧೀಜಿಯವರು ಹಾಕಿಕೊಟ್ಟಂತಹ

ಮಾರ್ಗದಲ್ಲಿ ನಾವು ನಡೆಯಬೇಕು. ದೇಶಕ್ಕಾಗಿ ದುಡಿಯವಂತ ಜೀವನ ನಡೆಸಬೇಕು ಹಾಗೂ ದೇಶಕ್ಕಾಗಿ ಬದುಕಬೇಕು ಎಂದು ಹೇಳಿದರು.

ನೈಸಗಿಕ ಸಂಪತ್ತು ಮತ್ತು ಮಾನವ ಸಂಪತ್ತನ್ನು ಸದುಪಯೋಗಪಡಿಸಿಕೊಂಡು ದೇಶವನ್ನು ಪ್ರಗತಿಯತ್ತ ಕೊಂಡೊಯ್ಯುವುದೇ ನಿಜವಾದ ದೇಶಭಕ್ತಿ. ಪ್ರತಿಯೊಬ್ಬ ನಾಗರೀಕನೂ ಕರ್ತವ್ಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ನಾವು ಇತರರಿಗಾಗಿ ಬದುಕಬೇಕು ಎಂಬ ಚಿಂತನೆ ಪ್ರತಿಯೊಬ್ಬ ನಾಗರೀಕರಲ್ಲೂ ಬರಬೇಕು. ಜನರಿಗೆ ಉದ್ಯೋಗ ಸೃಷ್ಟಿ ಮಾಡಲು ಹೆಚ್ಚಿನ ಮಹತ್ವವನ್ನು ನೀಡಬೇಕು. Money is Product of Economy. ನಾವು ಜೀವನದಲ್ಲಿ ಕಷ್ಟಪಟ್ಟು ದುಡಿದಾಗ ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯ. ಆರ್ಥಿಕವಾಗಿ ಮುಂದುವರೆಯಲು ಸಬಲರಾಗುತ್ತೇವೆ. ದುಡಿಮೆಯಲ್ಲಿಯೇ ದೇವರಿದ್ದಾನೆ ಎಂದು ತಿಳಿಸಿದರು.

ಪರಿವರ್ತನೆಯೇ ಗಾಂಧೀಜಿಯವರ ಬಹು ದೊಡ್ಡ ಗುಣ. ನಾವು ಜೀವನದುದ್ದಕ್ಕೂ ಸುಳ್ಳುಗಳನ್ನು ಹೇಳಿ ಬದುಕು ನಡೆಸಬಾರದು. ಸುಳ್ಳಿಗೂ ಒಂದು ಬೆಲೆಯಿದೆ. ಅದನ್ನು ವಿರಳವಾಗಿ ಖರ್ಚು ಮಾಡಬೇಕೆ ವಿನಃ ಅದನ್ನೇ ರೂಢಿಸಿಕೊಳ್ಳಬಾರದು. ಯಾವಾಗಲೂ ಸತ್ಯದ ಹಾದಿಯಲ್ಲಿ ನಡೆಯಬೇಕು. ಸತ್ಯಕ್ಕೆ ತನ್ನದೇ ಆದ ಮಹತ್ವ ಹಾಗೂ ಹೆಚ್ಚು ಬೆಲೆಯಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಮಾಡಲಾಗುತ್ತಿದೆ, ಈಗಾಗಲೇ 18 ಜಿಲ್ಲೆಗಳಲ್ಲಿ ಗಾಂಧೀ ಭವನ ನಿರ್ಮಾಣ ಆಗಿದೆ. ಉಳಿದ 12 ಜಿಲ್ಲೆಗಳಲ್ಲಿಯೂ ಸಹ ಗಾಂಧೀ ಭವನವನ್ನು ಕೂಡಲೇ ನಿರ್ಮಾಣ ಮಾಡಿ ಲೋಕಾರ್ಪಣೆ ಮಾಡಲು ಕ್ರಮ ವಹಿಸಲಾಗುವುದು. ಈ ಗಾಂಧೀ ಭವನಗಳಲ್ಲಿ ಗಾಂಧೀಜಿಯವರ ತತ್ವಗಳನ್ನು, ಗಾಂಧೀಜಿಯವರ ಭಾವನೆಗಳನ್ನು, ಗಾಂಧೀಜಿಯವರ ಚಿಂತನೆಗಳನ್ನು ಬೆಳೆಸಬಲ್ಲ ಕಾರ್ಯಗಳು ನಡೆಯಬೇಕು. ಗಾಂಧೀಜಿಯವರ ಹೆಜ್ಜೆ ಗುರುತು ನಮ್ಮ ಜೀವನದಲ್ಲಿ ನಡೆಯಲಿ. ಖಾದಿ ಗ್ರಾಮದ್ಯೋಗವನ್ನು ಪುನರ್‌ಚೇತನಗೊಳಿಸಲು ಸರ್ಕಾರವು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಎಂದು ಹೇಳಿದರು.

ಇಂದು ಮಹಾತ್ಮ ಗಾಂಧೀ ಸೇವಾ ಪ್ರಶಸ್ತಿಯನ್ನು ಸಿದ್ದಗಂಗಾ ಮಠಕ್ಕೆ ಹಾಗೂ ಶ್ರೀಮತಿ ಮೀರಾತಾಯಿ ಕೊಪ್ಪಿಕರ್ ಅವರಿಗೆ ನೀಡುತ್ತಿರುವುದು ನನ್ನ ಭಾಗ್ಯ. ಸಾವಿರಾರು ಬಡ ಮಕ್ಕಳಿಗೆ ಅನ್ನದಾನದ ಜೊತೆಗೆ ವಿದ್ಯಾದಾನ ಮಾಡುತ್ತಿರುವ ಸಂಸ್ಥೆ ಹಾಗೂ ಹಿರಿಯರೂ, ಸ್ವಾತಂತ್ರ್ಯ ಹೋರಾಟಗಾರರು, ಗಾಂಧೀ ಮತ್ತು ವಿನೋಬಾ ಬಾವೆಯವರ ಅನುಯಾಯಿಗಳು ಆದ 97 ವರ್ಷದ ಹಿರಿಯರನ್ನು ಗುರುತಿಸಿ ಗೌರವ ಸಲ್ಲಿಸುತ್ತಿರುವುದು ನಿಜವಾಗಲೂ ನನಗೆ ಅತೀವ ಸಂತೋಷ ತಂದಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

2020 ಹಾಗೂ 2021ನೇ ಸಾಲಿನ ಮಹಾತ್ಮ ಗಾಂಧೀ ಸೇವಾ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷರಾದ ಕರ್ನಾಟಕ ಉಚ್ಚನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿಗಳಾದ ಶ್ರೀ ಅಶೋಕ್ ಬಂಗಾರೆಪ್ಪಾ ಹಿಂಚಿಗೇರಿ ಅವರು ಮಾತನಾಡಿ ಜನಸೇವೆಯೇ ಜನಾರ್ಧನ ಸೇವೆ ಎಂದು ತೋರಿಸಿಕೊಟ್ಟವರು ಸಿದ್ದಗಂಗಾ ಮಠದ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರು. ನಡೆದಾಡುವ ದೇವರೆಂದೇ ಕರೆಲಾಗುವ ಶಿವಕುಮಾರ ಸ್ವಾಮೀಜಿಯವರು ಸಾವಿರಾರು ಜನರಿಗೆ ಅನ್ನದಾಸೋಹದ ಜೊತೆಜೊತೆಯಲ್ಲಿಯೇ ಅಕ್ಷರ ದಾಸೋಹವನ್ನು

ಊಣಬಡಿಸಿದ ಮಹಾನ್ ಚೇತನ. ಭಕ್ತರು ಮತ್ತು ಭಗವಂತನ ನಡುವಿನ ಬಾಂಧವ್ಯ ಜಾತ್ಯಾತೀತವಾಗಿರಬೇಕು ಎಂದು ತೋರಿಸಿಕೊಟ್ಟವರು. ಅವರನ್ನು ಆಧುನಿಕ ಬಸವಣ್ಣ ಎಂದರೂ ತಪ್ಪಾಗಲಾರದು ಎಂದು ಹೇಳಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ವಿನೋಭಾ ಬಾವೆಯವರ ಜೊತೆ ಭೂ ಚಳುವಳಿಯಲ್ಲಿ ಭಾಗವಹಿಸಿದ ಮುಧೋಳದ ಹಿರಿಯ ಚೇತನ ಮೀರಾತಾಯಿ ಕೊಪ್ಪಿಕರ್ ಅವರಿಗೆ 2008ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದ ಸಮಯದಲ್ಲಿ ಆ ಪ್ರಶಸ್ತಿಯನ್ನು ಬಡವರಿಗೆ ದಾನ ಮಾಡಿದಂತಹ ವ್ಯಕ್ತಿ ಶ್ರೀಮತಿ ಮೀರಾತಾಯಿ. ಗಾಂಧೀಜಿಯವರ ಅನುಯಾಯಿಗಳು, ಸದಾ ತಾವೇ ನೂಲು ತಯಾರಿಸಿ ಅದರಿಂದ ಬಟ್ಟೆ ನೇಯ್ದು ಹಾಕಿಕೊಳ್ಳುತ್ತಿದ್ದರು. ಇಂದಿಗೂ ಬಡವರ ಬಗ್ಗೆ ಸದಾ ಮಿಡಿಯುವ ಹಿರಿಯ ಜೀವ ಎಂದು ಹೇಳಿದರು.

ಇಂದು ಕಾಮರಾಜ್ ಒಡೆಯರ್ ಅವರ ಪುಣ್ಯತಿಥಿಯೂ ಸಹ ಹೌದು. ಇವರನ್ನು ಮಧುರೈ ಗಾಂಧಿ, ತಮಿಳುನಾಡಿನ ಗಾಂಧಿ ಹಾಗೂ ಸೌತ್ ಇಂಡಿಯನ್ ಗಾಂಧಿ ಎಂದು ಕರೆಯಲಾಗುತ್ತಿತ್ತು. ಗಾಂಧೀವಾದವನ್ನು ಸದಾ ಪಾಲಿಸಿದವರು. ಎಂದೂ ಗಾಂಧೀವಾದದಿಂದ ದೂರ ಸರಿದವರಲ್ಲ. ಜೀವನದಲ್ಲಿ ನಿರಂತರವಾಗಿ ಉಳಿಯುವುದು ಜನಸೇವೆ ಮಾತ್ರ ಎಂದು ತಿಳಿಸಿಕೊಟ್ಟವರು ಕಾಮರಾಜ್ ಒಡೆಯರ್ ಎಂದು ಹೇಳಿದರು.

ಸರ್ಕಾರವು ಜನಸೇವೆಯಂತಹ ಅನೇಕ ಸಮಾಜ ಕಲ್ಯಾಣ ಸೇವೆಗಳನ್ನು ಜಾರಿಗೆ ತರುವುದರೊಂದಿಗೆ ಕರ್ನಾಟಕ ರಾಜ್ಯವನ್ನು ರಾಮ ರಾಜ್ಯವನ್ನಾಗಿಸಲಿ ಎಂದು ಆಶಿಸಿದರು.

2020ನೇ ಸಾಲಿನ ಮಹಾತ್ಮಗಾಂಧಿ ಸೇವಾ ಪ್ರಶಸ್ತಿಯನ್ನು ಶ್ರೀಮತಿ ಮೀರಾತಾಯಿ ಕೊಪ್ಪಿಕರ್ ಅವರ ಪರವಾಗಿ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರಿಗೆ ಹಾಗೂ 2021ನೇ ಸಾಲಿನ ಮಹಾತ್ಮಗಾಂಧಿ ಸೇವಾ ಪ್ರಶಸ್ತಿಯನ್ನು ಸಿದ್ದಗಂಗಾ ಮಠದ ಪರವಾಗಿ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಗಳ ನಿರಂತರ ಆರೋಗ್ಯವನ್ನು ನೋಡಿಕೊಂಡು ಚಿಕಿತ್ಸೆ ನೀಡುತ್ತಿದ್ದ, ಸದಾ ಸಂಸ್ಥೆಯನ್ನು ಕಟ್ಟಿ ಬೆಳೆಸುವಲ್ಲಿ ಕೈಜೋಡಿಸಿದಂತಹ ಡಾ॥ ಶಿವಪ್ಪ ಅವರಿಗೆ ಪ್ರದಾನ ಮಾಡಲಾಯಿತು.

ಕಾರ್ಯಕ್ರಮ ಮೊದಲಿಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಅವರು ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ, ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವ ಹಾಲಪ್ಪ ಬಸಪ್ಪ ಆಚಾರ್, ಸಂಸತ್ ಸದಸ್ಯ ಶಿವಕುಮಾರ್ ಉದಾಸಿ, ಸಂಸದ ಹೆಚ್.ಕೆ.ಪಾಟೀಲ್, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಖ್ಯಾತ ರಂಗ ಕರ್ಮಿ ಪ್ರಸನ್ನ, ದೇವರಾಜು ಅರಸು ಪ್ರಶಸ್ತಿ ಪುರಸ್ಕೃತರು ಹಾಗೂ ಗಾಂಧೀ ಚಿಂತಕರೂ ಆದ ಶ್ರೀಮತಿ ಎಸ್. ಜಿ. ಸುಶೀಲಮ್ಮ, ಡಾ.ಎಲ್. ಹನುಮಂತಯ್ಯ, ಮೈಲಾರ ಮಹದೇವ ಟ್ರಸ್ಟ್‌ನ ಮಕ್ಕಳು, ಮೊಮ್ಮಕ್ಕಳು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಮಂಜುನಾಥ್ ಪ್ರಸಾದ್ ಹಾಗೂ ಆಯುಕ್ತರಾದ ಜಿ. ಜಗದೀಶ್ ಸೇರಿದಂತೆ ಅನೇಕ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಗಣ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

ಛಾಯಾಚಿತ್ರ ಶೀರ್ಷಿಕೆ:

ಇಂದು ನಗರದ ಕಬ್ಬನ್ ಪಾರ್ಕ್ ನಲ್ಲಿ ಕರ್ನಾಟಕ ಅರಣ್ಯ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ 67ನೇ ವನ್ಯಜೀವಿ ಸಪ್ತಾಹ-2021 ದ "ವನ್ಯಜೀವಿಗಳ ಸಂರಕ್ಷಣೆಗಾಗಿ ನಡಿಗೆ" ಜಾಥಾ ಕಾರ್ಯಕ್ರಮಕ್ಕೆ ಘನತೆವೆತ್ತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅರಣ್ಯ ಹಾಗೂ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರಾದ ಶ್ರೀ ಉಮೇಶ್ ವಿಶ್ವನಾಥ ಕತ್ತಿ, ಶಿವಾಜಿನಗರದ ಮಾನ್ಯ ವಿಧಾನಸಭಾ ಸದಸ್ಯರಾದ ರಿಜ್ವಾನ್ ಆರ್ಷದ್, ಸಂಸದರಾದ ಪಿ.ಸಿ ಮೋಹನ್ , ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಜಾವೇದ್ ಅಖ್ತರ್, ಅರಣ್ಯ ಪಡೆ ಮುಖ್ಯಸ್ಥರಾದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ ಸಂಜಯ್ ಮೋಹನ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

Today Shri Thaawarchand Gehlot, Hon'ble Governor of Karnataka inaugurated 67th Wildlife Week – 2021 organized by Karnataka Forest Department. Shri Umesh Vishwanath Katti, Hon’ble Minister of Forests, Shri Rizwan Arshad, MLA, & other dignitaries were also present.

2. ರಾಷ್ಟ್ರಪಿತ ಮೋಹನ್ ದಾಸ್ ಕರ್ಮ್ ಚಂದ್ ಗಾಂಧೀಜಿ ರವರ ಜನ್ಮದಿನದ ಅಂಗವಾಗಿ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ರಾಜಭವನದ ಅಂಗಳದಲ್ಲಿರುವ ಗಾಂಧಿ ಪುತ್ಥಳಿಗೆ ಶನಿವಾರ ಪುಷ್ಪಾರ್ಚನೆ ಮಾಡಿ, ನಮಿಸಿದರು. ಈ ಸಂದರ್ಭದಲ್ಲಿ ರಾಜಭವನದ ಅಧಿಕಾರಿಗಳು ಸಿಬ್ಬಂದಿಗಳು ಉಪಸ್ಥಿತರಿದ್ದರು.

Shri Thaawarchand Gehlot Hon’ble Governor of Karnataka garlanding the statue of Mahatma Gandhi on the occasion of Gandhi Jayanthi Celebrations at the lawns of Rajbhavan on 2nd October 2021. Rajbhavan Officials and Staffs were present.